
# ಕೊರೊನಾ ಎಂಬ ರೂಪಕ

ಕೊರೊನಾ ವೈರಸ್‌ನಿಂದಾದ ಅಡ್ಡ ಪರಿಣಾಮ ಈಗಾಗಲೇ ಎಲ್ಲ ರಂಗಗಳಲ್ಲೂ ಕಾಣಿಸಿಕೊಂಡಿದೆ. ಮುಂದಿನ ದಿನಗಳಲ್ಲಿ ಅದರ ತೀವ್ರತೆ ಇನ್ನಷ್ಟು ಹೆಚ್ಚಬಹುದು. ಸಾಹಿತ್ಯ ಕೃತಿಗಳ ಪ್ರಕಟಣೆ, ರಂಗಭೂಮಿ, ಸಿನಿಮಾ, ಸಂಗೀತಗಳೂ ಇದರಿಂದ ಹೊರತಾಗಿಲ್ಲ. ಇವೆಲ್ಲವೂ ಕೆಲಕಾಲ ಮಂಕಾಗಲಿವೆ. ಅವು ಚೇತರಿಸಿಕೊಳ್ಳಲು ಕಾಲಮಿತಿಯಾಗಲೀ, ಹೀಗಾದರೆ ಹಾಗಾಗುತ್ತದೆ ಎಂಬ ನಿರ್ದಿಷ್ಟ ತರ್ಕವಾಗಲೀ ಇಲ್ಲ. ಮನುಷ್ಯನ ಬಿಡುವಿನ ಕಾಲದ ಚಟುವಟಿಕೆಗಳಾದ ಲಲಿತ ಕಲೆಗಳಿಗೆ ತಮ್ಮ ಎಂದಿನ ಗತಿಗೆ ಮರಳಲು ಅವುಗಳದೇ ಆದ ವೇಳೆ ಬೇಕು. ಆರ್ಥಿಕತೆಗೂ ದೊಡ್ಡ ಹೊಡೆತ ಬಿದ್ದಿರುವುದರಿಂದ ಯಾವುದೂ ಅದು ಬೀರಲಿರುವ ಪರಿಣಾಮದಿಂದ ತಪ್ಪಿಸಿಕೊಳ್ಳಲಾಗದು. ಇನ್ನುಮುಂದೆ ಹೆಚ್ಚಲಿರುವ ನಿರುದ್ಯೋಗ, ಬಡತನಗಳಿಂದಾಗಿ ಇವನ್ನು ಹೆಗಲ ಮೇಲೆ ಹೊತ್ತು ನಡೆಯುವ ಚೈತನ್ಯ, ಉತ್ಸಾಹ ಜನರಲ್ಲಿ ಉಳಿದೀತೆ ಎಂಬ ಪ್ರಶ್ನೆಯೂ ಎದುರಾಗಲಿದೆ. ಅದಕ್ಕೆ ಉತ್ತರ ನಮ್ಮ ನಾಳೆಗಳಲ್ಲಿದೆ.

ಕೊರೊನಾ ವೈರಸ್‌ನಿಂದಾಗಿ ಮನುಷ್ಯ ಎದುರಿಸುತ್ತಿರುವ ದಾರುಣ ಸ್ಥಿತಿ ಮುಂದಿನ ಸಾಹಿತ್ಯ ಕೃತಿಗಳ ವಸ್ತುವಾಗಲಿದೆ. ಅದು ಸಾಹಿತ್ಯದ ಜೊತೆಗೆ ಅನೇಕ ಕಲೆಗಳ ವಸ್ತು ಕೂಡ. ಇದರೊಂದಿಗೇ ಭ್ರಷ್ಟಾಚಾರ, ಜಾತೀಯತೆ, ಅಸಮಾನತೆ ಎಂಬ ಗುಣವಾಗಲು ಒಲ್ಲದ ರೋಗಗಳೂ ಬರವಣಿಗೆಗೆ ಒದಗಬಹುದು. ವಸ್ತು ಯಾವುದೇ ಇದ್ದರೂ ಅದರ ಮೂಲಕ ಮಂಡಿಸುವ, ಕಂಡುಕೊಳ್ಳುವ ಅನುಭವ ಮುಖ್ಯ. ಬದುಕಿನ ಅರ್ಥವೇನು ಎಂಬ ಮನುಕುಲದ ಅನಾದಿಯ ಹುಡುಕಾಟಕ್ಕೆ ಕೊರೊನಾವನ್ನು ಕೇಂದ್ರದಲ್ಲಿಟ್ಟುಕೊಂಡು ಉತ್ತರಗಳನ್ನು ಕಂಡುಕೊಳ್ಳಬಹುದು. ಸಾಹಿತ್ಯ ಮಾತ್ರವಲ್ಲ ನಮ್ಮ ನುಡಿಗಟ್ಟು, ಜೀವನಶೈಲಿ, ಯೋಚನೆಗಳ ಮೇಲೆ ಅದು ದೀರ್ಘಕಾಲದ ಪರಿಣಾಮ ಬೀರಲಿದೆ. ಮಾಸ್ಕ್ ಆಧುನಿಕ ಮಾನವನ ಶಾಶ್ವತ ರೂಪಕವಾಗಿ, ವ್ಯಕ್ತಿಗತ ಅಂತರವು ಸಂಕೇತವಾಗಿ, ರೋಗದ ಭಯ ಬಿಡದೆ ಕಾಡುವ ಸ್ಥಾಯಿ ಪ್ರತಿಮೆಯಾಗಿ ಉಳಿದುಕೊಳ್ಳಬಹುದು.



ಹೊಸದಾದ, ಕಂಡರಿಯದ ಕತೆಗಳನ್ನು ಕೊರೊನಾ ಇನ್ನುಮುಂದೆ ಹುಟ್ಟಿಸುವುದರಲ್ಲಿ, ಪ್ರಕಟಿಸುವುದರಲ್ಲಿ ಅನುಮಾನವಿಲ್ಲ. ಲೇಖಕರು ಈಗಾಗಲೇ ಕೊರೊನಾ ಸ್ಥಿತಿಯೇ ವಸ್ತುವಾಗಿರುವ ಕೃತಿಗಳ ರಚನೆಗೆ ಸಿದ್ಧತೆ ನಡೆಸಿಯೇ ಇರುತ್ತಾರೆ. ಪ್ರತಿಭಾವಂತ ಲೇಖಕರು ತಮ್ಮ ಬರಹಗಳ ಮೂಲಕ ಮನುಷ್ಯನ ಕಾಯಿಲೆಯ ವಿವಿಧ ರೂಪಗಳಿಗೆ, ಅವಸ್ಥೆಗಳಿಗೆ ಕನ್ನಡಿ ಹಿಡಿಯಲಿದ್ದಾರೆ. ಮನುಷ್ಯ ಜಗತ್ತಿಗೆ ಸಾಂಕ್ರಾಮಿಕ ರೋಗಗಳು ಮಾಡಿದ ಗಾಯವನ್ನು ತಕ್ಷಣಕ್ಕೆ ಅಳಿಸಲಾಗದು. ಅವೆಲ್ಲ ಮರೆಯಾಗಲು ತಲೆಮಾರುಗಳೇ ಬೇಕು. ಆ ಅಳಿಸಲಾಗದ ಗಾಯಗಳ ವೇದನೆ ಮುಂಬರುವ ಸಾಹಿತ್ಯದಲ್ಲಿ ಹೇಗೆ ದಾಖಲಾಗಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಈ ಸಂಚಿಕೆಯಲ್ಲಿ ಕೊರೊನಾ ಕಾಲದ ಬದುಕನ್ನು ನೆನಪಿಸುವ ಉರ್ದು ಲೇಖಕ ರಾಜಿಂದರ್ ಸಿಂಗ್ ಬೇಡಿ ಅವರ 'ಪ್ಲೇಗ್ ಮತ್ತು ಕ್ವಾರಂಟೈನ್' ಕತೆಯ ಅನುವಾದ ಇದೆ. ಇದು ಮತ್ತು ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ, ತೆಲುಗು ಲೇಖಕಿ ಓಲ್ಗಾ ಅವರ ಸಂದರ್ಶನಗಳು ಈ ಸಲದ ವಿಶೇಷ.

**ಸಂದೀಪ ನಾಯಕ**